# ಕರ್ನಾಟಕ ಸರ್ಕಾರ

## ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/02/ಇಸಿಎಸ್(3)/2021

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದೂ.ಸಂ:080-22200777
E-mail: dte.commissioner@gmail.com

ದಿನಾಂಕ: 19.04.2021.

### ಸುತ್ತೋಲೆ

ವಿಷಯ : 2009-10, 2010-11 ಮತ್ತು 2011-12 ನೇ ಸಾಲಿನಲ್ಲಿ ಡಿಪ್ಲೊಮಾ ಕೋರ್ಸುಗಳಿಗೆ 1 ನೇ ವರ್ಷಕ್ಕೆ ಪ್ರವೇಶ ಪಡೆದ ಹಾಗೂ 2011-12, 2012-13, 2013-14 ಮತ್ತು 2014-15 ನೇ ಸಾಲಿನಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ 2 ನೇ ವರ್ಷಕ್ಕೆ ಪ್ರವೇಶ ಪಡೆದ ಐ.ಟಿ.ಐ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಕೊನೆಯ ಅವಕಾಶ ವಿಸ್ತರಿಸುವ ಬಗ್ಗೆ.

ಉಲ್ಲೇಖ :
1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಕಡತ ಸಂಖ್ಯೆ: DTE-EXAM0ECS(3)/5/2021.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 38 ಟಿಪಿಇ 2021 ದಿನಾಂಕ: 17.04.2021.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 63 ಡಿಟಿಇ 2021, ದಿನಾಂಕ: 17.04.2021.

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ 2009-10, 2010-11 ಮತ್ತು 2011-12 ರ ಶೈಕ್ಷಣಿಕ ವರ್ಷದಲ್ಲಿ 1 ನೇ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ 2011-12, 2012-13, 2013-14 ಮತ್ತು 2014-15 ರ ಶೈಕ್ಷಣಿಕ ವರ್ಷಗಳಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ 2 ನೇ ವರ್ಷಕ್ಕೆ ಪ್ರವೇಶ ಪಡೆದ ಐ.ಟಿ.ಐ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂಬರುವ 2021 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆ ಹಾಗೂ 2021 ರ ಅಕ್ಟೋಬರ್/ನವೆಂಬರ್ ಸೆಮಿಸ್ಟರ್ ಪರೀಕ್ಷೆ ಬರೆಯಲು ಸರ್ಕಾರವು ಅನುಮತಿಸಿದೆ.

ಮೇಲ್ಕಂಡ ಸರ್ಕಾರದ ಅನುಮತಿ ಹಿನ್ನೆಲೆಯಲ್ಲಿ ಸದರಿ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುವಂತೆ 2021 ರ ಏಪ್ರಿಲ್/ಮೇ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಗೆ **ದಿನಾಂಕ: 19.04.2021 ರಿಂದ 26.04.2021 ರ ತನಕ** ಅನ್ವಯಿಸುವ ಪರೀಕ್ಷಾ ಶುಲ್ಕವನ್ನು ದಂಡರಹಿತವಾಗಿ ಪಾವತಿಸಲು ಅನುಮತಿ ನೀಡಲಾಗಿದೆ.

………2

ಮುಂದುವರೆದು ಎಲ್ಲಾ ಪಾಲಿಟೆಕ್ನಿಕ್ ಗಳು ಈಗಾಗಲೇ ಪ್ರಶ್ನೆಪತ್ರಿಕೆಗಳ ಬೇಡಿಕೆಗಳನ್ನು ಸಲ್ಲಿಸಿದ್ದು, ಮೇಲ್ಕಂಡ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಿ ಪರೀಕ್ಷೆಗೆ ನೋಂದಣಿ ಮಾಡುವುದರಿಂದ, ಪ್ರಶ್ನೆಪತ್ರಿಕೆ ಬೇಡಿಕೆ ಪಟ್ಟಿಯಲ್ಲಿ ನಮೂದಿಸಿರದ ಅಥವಾ Indent ಮಾಡದ ಪ್ರಶ್ನೆಪತ್ರಿಕೆಯ ಅವಶ್ಯಕತೆ ಕಂಡುಬಂದಲ್ಲಿ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರು ಹಾಗೂ ಸಂಬಂಧಪಟ್ಟ ಸಿಬ್ಬಂದಿ ವರ್ಗದವರು ಅಂತಹ ಪ್ರಶ್ನೆಪತ್ರಿಕೆಯ ವಿವರ ಹಾಗೂ ಅವಶ್ಯಕ ಪ್ರಶ್ನೆಪತ್ರಿಕೆಗಳ ಸಂಖ್ಯೆಗಳನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ **bteqpindent@gmail.com** ಇ-ಮೇಲ್ ವಿಳಾಸಕ್ಕೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

(* ಟಿಪ್ಪಣಿಯು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

19/04/2024

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

**ಇವರಿಗೆ :** ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳ ಮಾಹಿತಿಗಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ

**ಪ್ರತಿ:**

1. ಆಯುಕ್ತರ ಆಪ್ತಶಾಖೆ
2. ನಿರ್ದೇಶಕರ ಆಪ್ತಶಾಖೆ
3. ಕಾರ್ಯದರ್ಶಿಯವರ ಆಪ್ತಶಾಖೆ
4. ಇ-ಗವರ್ನೆನ್ಸ್ ವಿಭಾಗ - ವೆಬ್ ಸೈಟ್ ನಲ್ಲಿ ಪ್ರಕಟಿಸಲು
5. ರಿಜಿಸ್ಟ್ರಾರ್ (ಪರೀಕ್ಷೆ)
6. ಇ.ಎ.ಪಿ ವಿಭಾಗ
7. ಕಛೇರಿ ಪ್ರತಿ